## ಇಮೋಜಿ ಭಾಷೆ



**ಕರ್ಕಿ ಕೃಷ್ಣಮೂರ್ತಿ**

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಕರ್ಕಿಯ ಕೃಷ್ಣಮೂರ್ತಿ ಪ್ರಸ್ತುತ ಬೆಂಗಳೂರು ವಾಸಿ. ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಸೀನಿಯರ್ ಜನರಲ್ ಮ್ಯಾನೇಜರ್. 'ಮಳೆ ಮಾರುವ ಹುಡುಗ' ಮತ್ತು 'ಗಾಳಿಗೆ ಮೆತ್ತಿದ ಬಣ್ಣ' ಕಥಾಸಂಗ್ರಹಗಳು; 'ಚುಕ್ಕಿ ಬೆಳಕಿನ ಜಾಡು' ಕಾದಂಬರಿ ಅವರ ಪ್ರಕಟಿತ ಕೃತಿಗಳು. 'ಇಮೋಜಿ ಭಾಷೆ' ಮೂಲಕ ಅಂಕಣಮನೆಯಲ್ಲಿ ನಿಂತಿರುವ ಅವರು, ಭಾಷೆ ಮತ್ತು ಸಮಾಜ ಪಡೆದುಕೊಳ್ಳುತ್ತಿರುವ ಹೊಸ ಸಾಧ್ಯತೆಗಳ ಹುಡುಕಾಟ ನಡೆಸಲಿದ್ದಾರೆ.

# ದಿಲ್ ಮಾಂಗಾ ಮೋರ್




'ಸುಧಾ', 'ತರಂಗ', ಮುಂತಾದ ನಿಯತಕಾಲಿಕಗಳು ವಾರಕ್ಕೆ ಲಕ್ಷಾಂತರ ಪ್ರತಿ ಪ್ರಿಂಟಾಗುತ್ತಿವೆ. ಅವುಗಳ ಮುಂದಿನ ಸಂಚಿಕೆಗಳಿಗೆ ಜನ ಕುತೂಹಲದಿಂದ ಕಾಯುತ್ತಿದ್ದಾರೆ. ನಿಯತಕಾಲಿಕಗಳಲ್ಲಿ ಬರುವ ಧಾರಾವಾಹಿಗಳನ್ನು ಸಿನಿಮಾ, ಟೆಲಿಸೀರೀಸ್ ಮಾಡಲು ನಿರ್ಮಾಪಕರು ಸರತಿಯಲ್ಲಿ ನಿಲ್ಲುತ್ತಿದ್ದಾರೆ. ಕನ್ನಡ ಪುಸ್ತಕಗಳ ಪ್ರಕಾಶಕರ ಕಚೇರಿ ಬೆಂಗಳೂರಿನ ಮಲ್ಯ ಟವರಿನ ತುತ್ತ ತುದಿಯ ಅಂತಸ್ತಿನಲ್ಲಿದೆ. ಮುದ್ರಕರು, ವಿತರಕರು ಕಟ್ಟಡದ ಉಳಿದ ಮಾಳಿಗೆಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಮುದ್ರಣ ಕ್ಷೇತ್ರದ ವಾರ್ಷಿಕ ವಹಿವಾಟು ಸಾವಿರ